# ಸ್ವಾಮಿ ಶುದ್ಧಾನಂದರು

**ಕಲ್ಕತ್ತದ ಉದ್ಬೋಧನ ಕಾರ್ಯಾಲಯದಿಂದ ಪ್ರಕಟವಾಗಿರುವ 'ಸ್ವಾಮೀಜೀರ್ ಪದಪ್ರಾಂತೇ' ಎಂಬ ಬಂಗಾಳಿ ಗ್ರಂಥದಲ್ಲಿನ ಸ್ವಾಮಿ ಶುದ್ಧಾನಂದಜಿಯವರ ಜೀವನ ಚರಿತ್ರೆಯ ಸಂಗ್ರಹಾನುವಾದ ಮಾಡಿದವರು ಬೆಂಗಳೂರು ರಾಮಕೃಷ್ಣ ಮಠದ ನಿಕಟ ಭಕ್ತರಾದ ವಿ.ಮೀನಾ ಅವರು.**

**ಭಗವಾನ್** ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರಾದ ಸ್ವಾಮಿ ಬ್ರಹ್ಮಾನಂದರು, ಶಿವಾನಂದರು, ಅಖಂಡಾನಂದರು, ವಿಜ್ಞಾನಾನಂದರ ಬಳಿಕ ಐದನೆಯ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸರ್ವಾಧ್ಯಕ್ಷರಾಗಿ ಬೆಳಗಿದವರು ಸ್ವಾಮಿ ಶುದ್ಧಾನಂದರು. ಸ್ವಾಮಿ ವಿವೇಕಾನಂದರಿಂದಲೇ ಮಂತ್ರದೀಕ್ಷೆಯನ್ನು ಪಡೆದು, ಅವರಿಂದಲೇ ಆಧ್ಯಾತ್ಮಿಕ ಶಿಕ್ಷಣವನ್ನು ಪಡೆದು, ಅತ್ಯಂತ ಗೌರವಾನ್ವಿತ ಸಂನ್ಯಾಸಿಗಳೆಂದು ಖ್ಯಾತಿಗಳಿಸಿದವರು.

ಇವರ ಪೂರ್ವಾಶ್ರಮದ ನಾಮಧೇಯ ಸುಧೀರಚಂದ್ರ ಚಕ್ರವರ್ತಿ. ೧೮೭೨ರಲ್ಲಿ ಕಲ್ಕತ್ತಾನಗರದಲ್ಲಿ ಧರ್ಮ ಪರಾಯಣರಾದ ಶ್ರೀ ಆಶುತೋಷ ಚಕ್ರವರ್ತಿಗಳ ಮಗುವಾಗಿ ಮಹಾಷ್ಟಮಿ ದಿನ ಜನ್ಮತಾಳಿದರು. ಬಾಲ್ಯದಿಂದಲೂ ಧರ್ಮದಲ್ಲಿ ಆಸಕ್ತಿ, ಸಾಧು ಸಂನ್ಯಾಸಿಗಳ ಮೇಲೆ ಪ್ರೇಮ ಇವರಿಗಿತ್ತು. ವಿದ್ಯಾರ್ಜನೆಯಲ್ಲಿ ಬಹು ಆಸಕ್ತಿ ತೋರುತ್ತಿದ್ದರು. ಸಿಟಿ ಕಾಲೇಜಿನಲ್ಲಿ ಅವರು *FA* ಓದುತ್ತಿರುವಾಗಲೇ ಅವರಿಗೆ ಅತ್ಯಂತ ಶುದ್ಧ ಚಾರಿತ್ರ್ಯರೂ, ಧರ್ಮಪರಾಯಣರೂ ಆದ ಹಲವರು ಸ್ನೇಹಿತರು ದೊರಕಿದರು.

ಒಂದು ದಿನ ತಮ್ಮ ಸ್ನೇಹಿತರೊಡಗೂಡಿ ದಕ್ಷಿಣೇಶ್ವರದ ಕಾಳೀ ದೇವಸ್ಥಾನವನ್ನು ಸಂದರ್ಶಿಸಿ ಆ ದಿನ ಅಲ್ಲಿಯೇ ಸಾಧನೆ, ಭಜನೆಯಲ್ಲಿ ಕಳೆದರು. ಅಡುಗೆಗೆ ಬೇಕಾದ ಪದಾರ್ಥಗಳನ್ನು ದೇವಸ್ಥಾನದ ಭಂಡಾರದಿಂದ ತಂದು ಅಡುಗೆ ಮಾಡಿ ತಿಂದರು. ಸುಧೀರರ ಮನಸ್ಸಿನಲ್ಲಿ ತೀವ್ರ ವೈರಾಗ್ಯ ಉಂಟಾಗಲು ಎರಡು ಬಾರಿ ಮನೆಯನ್ನು ಬಿಟ್ಟು ಹೊರಟುಹೋಗಿದ್ದರು. ಪ್ರಪಂಚವು ಆಳವಾದ ಬಾವಿಯಂತೆ, ಬಂಧುಗಳು ಕಾಳ ಸರ್ಪಗಳಂತೆ ಅವರಿಗೆ ಗೋಚರವಾಗತೊಡಗಿತು. ೧೮೯೦ರಲ್ಲಿ ತಮ್ಮ ಇತರ ಸ್ನೇಹಿತರೊಡನೆ ಕಾಂಕುರಗಾಚಿ ಯೋಗೋದ್ಯಾನಕ್ಕೆ ಹೋಗಿ ಬರಲಾರಂಭಿಸಿದರು. ಶ್ರೀರಾಮಕೃಷ್ಣರ ನಿಕಟ ಭಕ್ತರೂ 'ಕಥಾಮೃತ' (ಶ್ರೀರಾಮಕೃಷ್ಣ ವಚನವೇದ)ದ ಕರ್ತೃವೂ ಆದ ಶ್ರೀಮಾನ್ 'ಮ' ಅವರಿಂದ ಆದೇಶಿಸಲ್ಪಟ್ಟು ವರಾಹನಗರದ ಮಠಕ್ಕೂ ಹೋಗಿ ಬರಲಾರಂಭಿಸಿದರು. ಅವರಿಗೆ ಉಪದೇಶವೀಯುತ್ತಾ 'ಮ'ರವರು ಹೀಗೆಂದರು : 'ಗೃಹಸ್ಥರು ಎಷ್ಟಾದರೂ ಶ್ರೀರಾಮಕೃಷ್ಣರನ್ನು ಸರಿಯಾಗಿ ಪ್ರತಿಬಿಂಬಿಸಲಾರರು. ನೀವು ಶ್ರೀರಾಮಕೃಷ್ಣರ ಸರ್ವತ್ಯಾಗಿ ಸಂತಾನರನ್ನು ಹೋಗಿ ನೋಡಿ. ಅವರು ಈಗ ವರಾಹನಗರ ಮಠದಲ್ಲಿ ವಾಸವಾಗಿದ್ದಾರೆ. ಅಲ್ಲಿಯೇ ನೀವು ನಿಜವಾಗಿ ಶ್ರೀರಾಮಕೃಷ್ಣರ ಆದರ್ಶ ಜೀವನ ಏನು ಎಂಬುದನ್ನು ಅರಿಯುವಿರಿ.' ಹೀಗಾಗಿ ಶ್ರೀರಾಮಕೃಷ್ಣರ ನೇರ ಶಿಷ್ಯರಾದ, ಸ್ವಾಮಿ ರಾಮಕೃಷ್ಣಾನಂದ, ಯೋಗಾನಂದ, ನಿರಂಜನಾನಂದರ ಪ್ರತ್ಯಕ್ಷ ದರ್ಶನದಿಂದ ಸುಧೀರ್ ಮತ್ತು ಅವರ ಸ್ನೇಹಿತರು ಬಹು ಹರ್ಷಿತರಾದರು. ಈ ಯುವಕರಿಗೆ ಗಂಗಾತೀರದಲ್ಲಿ ಓಡಾಡುತ್ತಾ ಯೋಗಾನಂದರು ಶ್ರೀರಾಮಕೃಷ್ಣರ ಅನೇಕ ವಿಚಾರಗಳನ್ನು ಹೇಳುತ್ತಿದ್ದರು. ಒಂದು ದಿನ ಅದ್ವೈತಾನಂದರು ಸುಧೀರರನ್ನು ಕರೆದು 'ಶ್ರೀರಾಮಕೃಷ್ಣ ಪರಮಹಂಸರ ಸೂಕ್ತಿಗಳು' ಎಂಬ ಪುಸ್ತಕವನ್ನು ಕೊಟ್ಟು 'ಈ ಪುಸ್ತಕವನ್ನು ಓದು. ಮತ್ತೊಂದು ದಿನ ಇಲ್ಲಿಗೆ ಬಾ' ಎಂದರು. ಮಠದ ಸಾಧುಗಳ ಸಹವಾಸದಿಂದಾಗಿ ಸುಧೀರರ ಮತ್ತಿತರ ಯುವಕರ ಮನೋಬಲ, ಉತ್ಸಾಹ ಹೆಚ್ಚುತ್ತಾ ಹೋಯಿತು.

೧೮೯೭ರಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ವಿಜಯ ದುಂದುಭಿಯನ್ನು ಮೊಳಗಿ ಸ್ವಾಮಿ ವಿವೇಕಾನಂದರು ಭರತಖಂಡಕ್ಕೆ ಹಿಂತಿರುಗಿದರು. ಸುಧೀರರು ಸ್ವಾಮೀಜಿಯವರ ಭಾಷಣಗಳನ್ನೆಲ್ಲಾ ಪತ್ರಿಕೆಗಳಲ್ಲಿ ತಪ್ಪದೆ ಓದುತ್ತಿದ್ದರು. ಅವರನ್ನು ಇಂದಿನವರೆಗೂ ಧ್ಯಾನ ಮಾಡುತ್ತಿದ್ದರು, ಈಗ ಪ್ರತ್ಯಕ್ಷವಾಗಿ ನೋಡುವ ಭಾಗ್ಯ ಉಂಟಾಗಿದೆ. ಅವರ ದರ್ಶನ ಪಡೆಯಲು ಸ್ನೇಹಿತರಿಂದ ಒಡಗೂಡಿ 'ಸಿಯಲ್ದಾಹಾ' ನಿಲ್ದಾಣಕ್ಕೆ ಹೋದರು. ಅವರ ಬರವಿಗಾಗಿ ಕಣ್ರೆಪ್ಪೆ ಅಲುಗಿಸದೆ ನೋಡುತ್ತಿದ್ದಾರೆ ಸುಧೀರರು. ದೈವವಶಾತ್ ಸ್ವಾಮಿ ವಿವೇಕಾನಂದರನ್ನು ಕರೆತಂದ ರೈಲು ಸುಧೀರರ ಎದುರಿಗೇ ಬಂದು ನಿಂತಿತು. ತದೇಕ ದೃಷ್ಟಿಯಿಂದ ವೀಕ್ಷಿಸುತ್ತಿದ್ದ ಭಾವೀ ಶಿಷ್ಯರನ್ನು ಸ್ವಾಮಿ ವಿವೇಕಾನಂದರೂ ಸಹ ದೃಷ್ಟಿಸಿ ನೋಡಿದರು. ಎಂತಹ ಭಾಗ್ಯ! ಗುರುಶಿಷ್ಯರು ಪರಸ್ಪರ ದರ್ಶನ ಮಾಡಿಕೊಂಡರು. ಸ್ವಾಮಿಗಳನ್ನು ಸ್ವಾಗತಿಸಲು ಸಹಸ್ರಾರು ಜನ ನೆರೆದಿದ್ದಾರೆ. ಸ್ವಾಮಿಗಳೂ ಸಹ ಬಾಗಿಲ ಬಳಿ ಕೈಮುಗಿದು ನಿಂತು ಜನಸಮೂಹದ ಸ್ವಾಗತವನ್ನು ಸ್ವೀಕರಿಸಿ ಅವರಿಗೆಲ್ಲಾ ಅಭಿನಂದನೆಗಳನ್ನು ತಿಳಿಸಿದರು. ಎಲ್ಲರೂ ಆನಂದದಿಂದ 'ಜಯ' 'ಜಯ' ಧ್ವನಿಗೈಯುತ್ತಿರಲು ಅವರೊಂದಿಗೆ ಸುಧೀರರು ತಮ್ಮ ಜಯಘೋಷವನ್ನೂ ಸೇರಿಸಿದರು. ಸ್ವಾಮಿಗಳು ಕುಳಿತಿದ್ದ ಗಾಡಿಯ ಕುದುರೆಗಳನ್ನು ಬಿಚ್ಚಿ ಯುವಕರೇ ಎಳೆದರು. ಆ ದಿನ ಸುರೇಂದ್ರನಾಥರ ಕಲಾಶಾಲೆಯಲ್ಲಿ ಸ್ವಾಮೀಜಿಯವರು ವಿಶ್ರಾಂತಿ ಪಡೆಯುವುದಕ್ಕೆ ಏರ್ಪಾಟನ್ನು ಮಾಡಿದ್ದರು. ಬಹುವಾಗಿ ಆಯಾಸಗೊಂಡಿದ್ದ ಸ್ವಾಮಿ ವಿವೇಕಾನಂದರು ಸ್ವಲ್ಪ ಹೊತ್ತು ಮಾತನಾಡಿ ಮುಂದೆ ಹೋದರು. ಆ ಸಮಯದಲ್ಲೆಲ್ಲಾ ಸುಧೀರರು ಅವರನ್ನು ಅತಿ ನಿಕಟವಾಗಿ ದರ್ಶಿಸಿದರು.

ಅನಂತರ ಸ್ವಾಮೀಜಿಯವರು ಗೋಪಾಲಲಾಲ ಶೀಲರ ತೋಟದ ಮನೆಯಲ್ಲಿ ತಂಗುವಂತೆ ಏರ್ಪಾಟಾಯಿತು. ಸುಧೀರರು ಅಲ್ಲಿಗೆ ಸ್ವಾಮಿಗಳನ್ನು ನೋಡಲು ಹೋಗುತ್ತಿದ್ದರು. ಒಂದು ದಿನ ನಮಸ್ಕಾರ ಮಾಡುತ್ತಿದ್ದಂತೆ ಸ್ವಾಮಿಗಳು ಸುಧೀರರನ್ನು ಕುರಿತು 'ಏನು ನೀನು ಹೊಗೆ ಸೊಪ್ಪನ್ನು ಸೇವಿಸುವೆಯಾ?' ಎಂದರು. ತುಸು ಅಪ್ರತಿಭರಾದ ಸುಧೀರರು 'ಇಲ್ಲ' ಎಂದರು. ಆಗ ಸ್ವಾಮಿಗಳು 'ಹೌದು ಅದನ್ನು ಸೇವಿಸುವುದು ಒಳ್ಳೆಯದಲ್ಲ ಎಂದು ಬಹಳ

ಜನರು ಹೇಳುತ್ತಾರೆ' ಎಂದರು. ಇನ್ನೊಮ್ಮೆ ಅವರನ್ನು ನೋಡಲು ಸುಧೀರರು ಹೋದಾಗ ಸ್ವಾಮಿಗಳು ಸಿಂಹದಂತೆ ಅತ್ತಿಂದಿತ್ತ ಓಡಾಡುತ್ತಿದ್ದರು. ಶರತ್‌ಚಂದ್ರ ಚಕ್ರವರ್ತಿಗಳು ಅವರೊಡನೆ ಮಾತನಾಡುತ್ತಿದ್ದರು. ಸುಧೀರರು ತಮ್ಮ ಒಂದು ಪ್ರಶ್ನೆಯನ್ನು ತಾವೇ ನೇರವಾಗಿ ಕೇಳದೆ ಶರತ್‌ಚಂದ್ರ ಚಕ್ರವರ್ತಿಗಳ ಮೂಲಕ ಕೇಳಿಸಿದರು. ಅದೇನೆಂದರೆ : 'ಅವತಾರಪುರುಷರಿಗೂ, ಮುಕ್ತ ಅಥವಾ ಸಿದ್ಧ ಪುರುಷರಿಗೂ ಇರುವ ವ್ಯತ್ಯಾಸವೇನು?' ಸ್ವಾಮಿ ವಿವೇಕಾನಂದರು ಈ ಪ್ರಶ್ನೆಗೆ ನೇರ ಉತ್ತರವೀಯದೆ ಹೇಳಿದರು : 'ನನ್ನ ಸಿದ್ಧಾಂತವೇನೆಂದರೆ ವಿದೇಹಮುಕ್ತಿಯೇ ಸರ್ವೋಚ್ಚವಾದ ಅವಸ್ಥೆ. ನಾನು ಸಾಧನಾವಸ್ಥೆಯಲ್ಲಿ ಭಾರತದಲ್ಲಿ ಅನೇಕ ಕಡೆ ಪ್ರಯಾಣ ಮಾಡುತ್ತಿದ್ದಾಗ, ಅನೇಕ ಗುಹೆ, ನಿರ್ಜನ ಪ್ರದೇಶಗಳಲ್ಲಿ ಅನೇಕ ಕಾಲ ಸಾಧನೆ ಭಜನೆಯಲ್ಲಿ ಕಳೆಯುತ್ತಿದ್ದೆ. ಅನೇಕ ವೇಳೆ ಮುಕ್ತಿ ಲಾಭವಾಗಲಿಲ್ಲವೆಂದು ಪ್ರಾಯೋಪವೇಶ ಮಾಡುವ ಸಂಕಲ್ಪ ಮಾಡಿದ್ದೆ. ಆಹಾ! ಎಷ್ಟೊಂದು ಸಾಧನೆ, ಭಜನೆ ಮಾಡಿದೆ! ಆದರೆ ನನಗೀಗ ಆ ಮುಕ್ತಿಕಾಮನೆಯ ಆಗ್ರಹವಿಲ್ಲ. ಈಗ ನನಗೇನೆನ್ನಿಸುತ್ತಿದೆ ಎಂದರೆ ಎಷ್ಟು ಕಾಲ ಈ ಲೋಕದಲ್ಲಿ ಒಬ್ಬ ವ್ಯಕ್ತಿಯಾದರೂ ಮುಕ್ತಿ ಇಲ್ಲದಿರುವನೊ ಅಲ್ಲಿಯವರೆಗೆ ನನ್ನ ಸ್ವಂತ ಮುಕ್ತಿಯ ಯಾವ ಪ್ರಯೋಜನವೂ ಇಲ್ಲ.' ಅತ್ಯಂತ ಹೃದಯಸ್ಪರ್ಶಿಯಾದ ರೀತಿಯಲ್ಲಿ ಈ ಮಾತನ್ನು ಅವರು ಹೇಳಿದರು. ಇಂತಹ ಕರುಣಾಪೂರಿತವಾದ ಮಾತನ್ನು ಸಾಮಾನ್ಯರು ಹೇಳಲು ಸಾಧ್ಯವೇ? ಸುಧೀರರು ಸವಿಸ್ಮಯದಿಂದ ಭಾವಿಸಲಾರಂಭಿಸಿದರು, 'ಇವರು ತಮ್ಮ ಸ್ವಂತ ವಿಷಯವನ್ನೇ ಹೇಳಿ ಅವತಾರ ಪುರುಷರ ಲಕ್ಷಣ ಹೇಳುತ್ತಿರುವರೇನು? ಇವರೇ ಓರ್ವ ಅವತಾರ ಪುರುಷರೇ' ಎಂದು.

ಇನ್ನೊಂದು ದಿನ ಸುಧೀರರನ್ನೂ ಮತ್ತು ಅವರ ಸ್ನೇಹಿತ ಖಗೇನರನ್ನೂ ಕರೆದುಕೊಂಡು ಹೋಗಿ ಹರಮೋಹನ ಮಿತ್ರರು ಸ್ವಾಮೀಜಿಯವರಿಗೆ ಹೇಳಿದರು : 'ಸ್ವಾಮೀಜಿ, ಇವರೀರ್ವರೂ ನಿಮ್ಮ ಅಭಿಮಾನಿಗಳು. ಇವರು ವೇದಾಂತವಿಚಾರವನ್ನೂ ಮಾಡುತ್ತಾರೆ.' ವೇದಾಂತವಿಚಾರ ಮಾಡುತ್ತಾರೆ ಎನ್ನುತ್ತಿದ್ದಂತೆ ವಿವೇಕಾನಂದರು ಕೇಳಿದರು, 'ಉಪನಿಷತ್ತನ್ನು ಓದಿರುವಿರಾ?' ಎಂದು. 'ಬಹು ಕಡಿಮೆ' ಎಂದರು ಸುಧೀರರು. ಆಗ ಸ್ವಾಮಿಗಳು 'ಯಾವ ಉಪನಿಷತ್ತನ್ನು ಓದಿರುವಿರಿ?' ಎಂದಾಗ 'ಕಠ ಉಪನಿಷತ್ತು' ಎಂದುತ್ತರಿಸಿದರು ಸುಧೀರರು. ಆಗ ಆನಂದಿತರಾದ ಸ್ವಾಮೀಜೀ 'ಆಹಾ! ಕಠ ಉಪನಿಷತ್ತೇ? ಅದು ಬಹು ಸುಂದರವಾದದ್ದು, ಭವ್ಯವಾದದ್ದು' ಎಂದು ಪ್ರಶಂಸೆ ಮಾಡಿದರು.

ಮಾರನೆಯ ದಿನವೂ ಮಾತು ಉಪನಿಷತ್ತಿನ ಬಗ್ಗೆಯೇ ನಡೆಯಿತು. ಅಂದು ಸುಧೀರರು ಸಣ್ಣ ಸಣ್ಣ ಉಪನಿಷತ್ತಿನ ಪುಸ್ತಕಗಳನ್ನು ತೆಗೆದುಕೊಂಡು ಬಂದಿದ್ದರು. ಸ್ವಾಮಿ ವಿವೇಕಾನಂದರೇ ಮೂರ್ತೀಭವಿಸಿದ ಉಪನಿಷತ್ತಾಗಿ ಕುಳಿತಿದ್ದರು. ವಿದ್ಯುತ್ ಸಂಚಾರವಾದಂತೆ ಉಪನಿಷತ್ತನ್ನು ಪಾಠ ಮಾಡಲಾರಂಭಿಸಿದ ಸ್ವಾಮೀಜಿಯವರ ಸಮ್ಮುಖದಲ್ಲಿ ತದೇಕಚಿತ್ತರಾಗಿ ಸುಧೀರರು ಕುಳಿತಿದ್ದರು. ಮಧ್ಯೆ ಮಧ್ಯೆ ಸ್ವಾಮಿಗಳು ವ್ಯಾಖ್ಯಾನ ಮಾಡುತ್ತಿದ್ದರು. ಸ್ವಾಮಿ ವಿವೇಕಾನಂದರಿಂದ ಪ್ರೇರಿತವಾದ ಈ ಉಪನಿಷತ್ ಪ್ರೀತಿಯು ಸುಧೀರರಲ್ಲಿ ಕಡೆಯವರೆಗೂ ಇತ್ತು. ಅವರು ತಮ್ಮ ಮುಂದಿನ ದಿನಗಳಲ್ಲಿ ಈ ರೀತಿ ಹೇಳುತ್ತಿದ್ದರು: ಬೇರೆ ಬೇರೆ ಸಮಯಗಳಲ್ಲಿ ವಿವೇಕಾನಂದರ ಮುಖಾರವಿಂದದಿಂದ ಹೊರಹೊಮ್ಮಿದ, ಶ್ರುತಿ, ಲಯ, ತಾಲ ಸಹಿತವಾದ ಉಪನಿಷತ್ತಿನ ಪಠನೆ ಈಗಲೂ ನನ್ನ ಕಿವಿಯಲ್ಲಿ ಕೇಳುತ್ತಿದೆ. ನನ್ನ ಮನಸ್ಸು ಯಾವಾಗಲಾದರೂ ಪರಚರ್ಚೆಯಲ್ಲಿ ಮಗ್ನವಾಗಿ ಆತ್ಮಚಿಂತನೆಯನ್ನು ಬಿಡುತ್ತಿತ್ತೋ ಆಗ ನನಗೆ ಕೇಳಿಬರುತ್ತಿತ್ತು ಅವರ ಕಿನ್ನರ ಕಂಠದಿಂದ 'ಕೇವಲ ಆತ್ಮನನ್ನು ಅರಿತುಕೊ, ಬೇರೆಯ ಮಾತುಗಳನ್ನು ಬಿಡು. ಇದು ಅಮೃತತ್ವಕ್ಕೆ ಸೇತುವೆ' ಎಂದು. ಯಾವಾಗ ಆಕಾಶದಲ್ಲಿ ಘೋರ ಸಿಡಿಲು ಮಿಂಚುಗಳು ಕಾಣಿಸಿಕೊಂಡಾಗ ದಿಗಂತದ ಕಡೆ ತಮ್ಮ ಬೆರಳನ್ನು ಪ್ರಸಾರಿಸಿ ಸ್ವಾಮೀಜಿ ಹೇಳುತ್ತಿದ್ದರು, 'ಅಲ್ಲಿ ಸೂರ್ಯನಾಗಲೀ, ಚಂದ್ರನಾಗಲೀ, ನಕ್ಷತ್ರಗಳಾಗಲೀ ಬೆಳಗುವುದಿಲ್ಲ—ಯಾವ ಬೆಳಕೂ ಅದನ್ನು ಬೆಳಗಲಾರದು—ಇನ್ನು ಸಾಮಾನ್ಯವಾದ ಈ ಅಗ್ನಿಯ ಪಾಡೇನು? ಆತ್ಮನ ಪ್ರಕಾಶದಿಂದಲೇ ಎಲ್ಲವೂ ಪ್ರಕಾಶಮಾನವಾಗಿದೆ' ಎಂದು. ಎಂದಾದರೂ ಮನಸ್ಸು ತತ್ತ್ವಜ್ಞಾನದಿಂದ ದೂರವಾಗಿ ಹೃದಯ ಹತಾಶೆಯ ಸ್ಥಿತಿಗೆ ಬರುತ್ತಿತ್ತೊ ಆಗ ಸ್ವಾಮಿ ವಿವೇಕಾನಂದರು ಆನಂದದಿಂದ ಹೇಳುತ್ತಿದ್ದ ಈ ಆಶ್ವಾಸನೆಯ ವಾಣಿಯನ್ನು ಆಲಿಸುತ್ತೇನೆ : 'ಹೇ ಅಮೃತಪುತ್ರರಿರಾ, ಹೇ ದಿವ್ಯಧಾಮನಿವಾಸಿಗಳೇ, ನೀವು ಕೇಳಿರಿ! ನಾನು ಆ ಮಹಾಪುರುಷನನ್ನು ಅರಿತಿರುತ್ತೇನೆ. ಆತನು ಆದಿತ್ಯನಂತೆ ಜ್ಯೋತಿರ್ಮಯನು; ಅಜ್ಞಾನ ಅಂಧಕಾರದಿಂದ ಅತೀತನಾಗಿದ್ದಾನೆ. ಆತನನ್ನು ಅರಿಯುವುದರಿಂದಲೇ ಮೃತ್ಯುವಿನಿಂದ ಪಾರಾಗಬಹುದು—ಮುಕ್ತಿಗೆ ಬೇರೆ ದಾರಿಯೇ ಇಲ್ಲ.'

ದಿನ ರಾತ್ರಿ ಸುಧೀರರು ಸ್ವಾಮೀಜಿಯವರ ಪೂತ ಸಾನ್ನಿಧ್ಯದಿಂದಾಗಿ ದಿವ್ಯ ಆನಂದದಲ್ಲಿ ತೇಲಾಡುತ್ತಿದ್ದರು. ಅವರ ದಿವ್ಯ ಆಕರ್ಷಣೆಯಿಂದಾಗಿ ತಮ್ಮನ್ನು ತಾವೇ ಅವರಿಗೆ ಅರ್ಪಿಸಿಕೊಂಡರು.

೧೮೯೭ ಫೆಬ್ರವರಿ ತಿಂಗಳು ಸರ್ವಸಂಗಪರಿತ್ಯಾಗ ಮಾಡಿ ಸುಧೀರರು ಆಲಂಬಜಾರಿನ ರಾಮಕೃಷ್ಣ ಮಠಕ್ಕೆ ಬಂದು ಸೇರಿದರು. ಡಾರ್ಜಿಲಿಂಗಿನಿಂದ ಹಿಂತಿರುಗಿದ ಸ್ವಾಮಿ ವಿವೇಕಾನಂದರು ಅವರನ್ನು ಮಠದಲ್ಲಿ ನೋಡಿ ಅತ್ಯಂತ ಆನಂದಿತರಾದರು. ಅವರು ಸ್ನೇಹದಿಂದ ಸುಧೀರರನ್ನು ಆಗಾಗ, 'ಮಗು' ಎಂದು ಕರೆಯುತ್ತಿದ್ದರು. ಸುಧೀರರೂ ಸಹ ಸ್ವಾಮೀಜಿಯವರ ಪದತಲದಲ್ಲಿ ಆಶ್ರಯ ಪಡೆದು ತಮ್ಮ ನಿಜಗೃಹವನ್ನು ಪ್ರವೇಶ ಮಾಡಿದಂತೆ ಶಾಂತಿಯನ್ನು ಅನುಭವಿಸಿದರು. ಮಠದ ಸಾಧು ಬ್ರಹ್ಮಚಾರಿಗಳಿಗಾಗಿ ನಿಯಮಾವಳಿಗಳನ್ನು ಬರೆಯಲು ಒಬ್ಬರು ಮುಂದೆ ಬರಬೇಕೆಂದು ಸ್ವಾಮಿ ವಿವೇಕಾನಂದರು ಕೇಳಿದಾಗ, ಕೇವಲ ಕೆಲವು ದಿನದ ಹಿಂದೆ ಮಠಕ್ಕೆ ಸೇರಿದ ಸುಧೀರರು ಪುಸ್ತಕ ಲೇಖನಿಗಳನ್ನು ತೆಗೆದುಕೊಂಡು ಮುಂದೆ ಬಂದರು. ಸ್ವಾಮೀಜೀಯವರು ಹೇಳುತ್ತಿದ್ದಂತೆ ಅದನ್ನೆಲ್ಲಾ ಸರಿಯಾಗಿ ಬರೆದುಕೊಳ್ಳಲಾರಂಭಿಸಿದರು.

ಶುದ್ಧಚಿತ್ತರಾದ ತ್ಯಾಗವ್ರತಿಗಳಾದ ಸುಧೀರರನ್ನು ಮಠದಲ್ಲಿ ಎಲ್ಲರೂ 'ಬ್ರಹ್ಮಚಾರಿ ಶುದ್ಧಾನಂದ' ಎಂದು ಕರೆಯಲಾರಂಭಿಸಿದರು. ೧೮೯೭ರಲ್ಲಿ ಅವರು ಸ್ವಾಮಿ ವಿವೇಕಾನಂದರಿಂದ ಮಂತ್ರದೀಕ್ಷೆಯನ್ನು ಪಡೆದರು. ನಂತರ ನಿರಂಜನಾನಂದರೊಂದಿಗೆ ಆಲ್ಮೊರಕ್ಕೆ ತೆರಳಿ ಸಾಧನೆಯಲ್ಲಿ ತತ್ಪರರಾದರು. ಅಲ್ಲಿಯೇ ವಿರಜಾಹೋಮವನ್ನು ಆಚರಿಸಿ ಸ್ವಾಮಿ ನಿರಂಜನಾನಂದರಿಂದ ಸಂನ್ಯಾಸ ದೀಕ್ಷೆಯನ್ನು ಪಡೆದರು. ಅಲ್ಲಿಂದ ಅವರು ಆಲಂಬಜಾರಿನ

ಮಠಕ್ಕೆ ಹಿಂತಿರುಗಿದರು. ಒಂದು ದಿನ ವಿವೇಕಾನಂದ ಸ್ವಾಮಿಗಳು ಬ್ರಹ್ಮಚಾರಿಗಳೊಡನೆ ಮಾತನಾಡುತ್ತಾ ಹಠಾತ್ತಾಗಿ ಶುದ್ಧಾನಂದರನ್ನು 'ಆತ್ಮತತ್ತ್ವದ ಬಗ್ಗೆ ಸ್ವಲ್ಪ ಮಾತನಾಡು' ಎಂದರು. ತಕ್ಷಣ ಶುದ್ಧಾನಂದರು ಎದ್ದು ನಿಂತು ಬೃಹದಾರಣ್ಯಕ ಉಪನಿಷತ್ತಿನ ಕೆಲವು ಭಾಗಗಳನ್ನು ಆರಿಸಿಕೊಂಡು ಮಾತನಾಡಿದರು. ಅವರು ತಮ್ಮ ಭವಿಷ್ಯತ್ ಕಾಲದಲ್ಲಿ ಈ ರೀತಿ ಹೇಳುತ್ತಿದ್ದರು: 'ಆಹಾ! ಸ್ವಾಮೀಜಿಯವರಂತಹ ಉತ್ಸಾಹದಾತರು, ಭರವಸೆಯ ಆಸರೆ ಮತ್ತೆಲ್ಲಿ ಸಿಗುತ್ತಾರೆ? ಅಂತಹ ವ್ಯಕ್ತಿ ಸಿಗುವುದು ಅತಿ ದುರ್ಲಭ. ಅವರು ತಮ್ಮ ಶಿಷ್ಯರಿಗೆ ಹೇಳುತ್ತಿದ್ದರು "ನನ್ನ ಮಕ್ಕಳಲ್ಲಿ ಪ್ರತಿಯೊಬ್ಬರೂ ನನಗಿಂತ ನೂರು ಪಟ್ಟು ಶ್ರೇಷ್ಠರಾಗಬೇಕೆಂಬುದು ನನ್ನ ಆಸೆ. ನಿಮ್ಮಲ್ಲಿ ಪ್ರತಿಯೊಬ್ಬರೂ ಪ್ರಚಂಡ ಸಾಹಸಿಗಳಾಗಬೇಕು–ಆಗಲೇ ಬೇಕು"ಎಂದು.'



ಸ್ವಾಮಿ ಶುದ್ಧಾನಂದರು

ಹೇಳುತ್ತಿದ್ದರು. ಇದನ್ನೆಲ್ಲಾ ಅಕ್ಷರಶಃ ಪಾಲಿಸುತ್ತಿದ್ದರು ಶುದ್ಧಾನಂದಜೀ. ಪ್ರತಿದಿನ ವಿವೇಕಾನಂದರು ವೇದಾಂತದ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಯಾವುದೇ ಕಾರಣಕ್ಕಾಗಲೀ ಶುದ್ಧಾನಂದರು ತರಗತಿಗೆ ತಪ್ಪಿಸದೆ ಬರಬೇಕೆಂದು ಹೇಳುತ್ತಿದ್ದರು. ಒಮ್ಮೆ ವೇದಾಂತದ ತರಗತಿ ನಡೆಯುತ್ತಿದ್ದಾಗ 'ಆರಾತ್ರಿಕ'ಕ್ಕೆ ಗಂಟೆ ಬಾರಿಸಲಾಯಿತು. ಪ್ರೇಮಾನಂದ ಸ್ವಾಮಿಗಳು ಎಲ್ಲರೂ ಆರತಿಗೆ ಬರಬೇಕೆನಲು ತುಸು ಬೇಸರಗೊಂಡ ವಿವೇಕಾನಂದರು ಹೇಳಿದರು 'ಬಾಬೂರಾಮ್, ಕೇವಲ ಆರತಿ ಮಾಡುವುದು ಗಂಟೆ ಬಾರಿಸುವುದು ಮಾತ್ರವೇ ಪೂಜೆಯೆ? ವೇದಾಂತ ಓದುವುದು ಮನನ ಮಾಡುವುದು ಪೂಜೆ ಅಲ್ಲವೆ?' ಎಂದು. ಇದನ್ನು ಕೇಳಿ ಎಲ್ಲರೂ ಸ್ತಬ್ಧರಾದರು ಹಾಗೂ ವೇದಾಂತದ ತರಗತಿ ಮುಂದುವರೆಯಿತು.

ಮಠದಲ್ಲಿ ಸ್ವಾಮಿ ವಿವೇಕಾನಂದರ ಇಂಗ್ಲೀಷ್ ಭಾಷಣಗಳ ಬಂಗಾಳಿ ತರ್ಜುಮೆ ನಡೆಯುತ್ತಿತ್ತು. ಪ್ರೇಮಾನಂದರ ಪ್ರೋತ್ಸಾಹದಿಂದಾಗಿ ಶುದ್ಧಾನಂದರೂ ಬಹಳ ಮಟ್ಟಿಗೆ ಅವರ ವಾಣಿಯನ್ನು ಬಂಗಾಳಿಗೆ ಭಾಷಾಂತರಿಸಿ ಸ್ವಾಮಿ ಅದ್ವೈತಾನಂದರಿಗೆ ಓದಿ ಹೇಳುತ್ತಿದ್ದರು. ಅದನ್ನೆಲ್ಲಾ ಒಂದು ದಿನ ಸ್ವಾಮಿ ವಿವೇಕಾನಂದರಿಗೆ ತೋರಿಸಲು ಅವರು ಸಂತೋಷಪಟ್ಟು ಶುದ್ಧಾನಂದರಿಗೆ ತಮ್ಮ ರಾಜಯೋಗವನ್ನು ಭಾಷಾಂತರಿಸಲು ಹೇಳಿದರು. ಬಂಗಾಳದಲ್ಲಿ ರಾಜಯೋಗ ಅಷ್ಟು ಜನಪ್ರಿಯವಾಗಿರಲಿಲ್ಲ. ಆದ್ದರಿಂದ ಬಂಗಾಳಿಗಳು ಯಥಾರ್ಥವಾಗಿ ರಾಜಯೋಗವೇನೆಂದು ತಿಳಿಯಲಿ ಎಂಬ ಉದ್ದೇಶವಿತ್ತೋ ಏನೊ. ಕ್ರಮೇಣ ಶುದ್ಧಾನಂದರು, ವಿವೇಕಾನಂದರ ಇಡೀ ಕೃತಿಗಳನ್ನು ಬಂಗಾಳಿಗೆ ಭಾಷಾಂತರಿಸಿದರು. ಅವರ ಆಂಗ್ಲ ಪದ್ಯ ಸಂನ್ಯಾಸೀ ಗೀತೆಯನ್ನೂ ಬಂಗಾಳಿ ಭಾಷೆಯಲ್ಲಿ ಅತ್ಯಂತ ಸುಂದರವಾಗಿ ಅನುವಾದ ಮಾಡಿದ್ದಾರೆ ಶುದ್ಧಾನಂದಜೀ. ಇದರಿಂದಾಗಿ ಇಡೀ ಬಂಗಾಳಕ್ಕೆ ವಿವೇಕಾನಂದರ ವಾಣಿ ತಲುಪಿದಂತಾಯಿತು. ಇದಕ್ಕೆ ಮೂಲ ಕಾರಣ ಶುದ್ಧಾನಂದರ ನಿಃಸ್ವಾರ್ಥ ಸೇವೆ.

'ವಿವೇಕಾನಂದರು ತಮ್ಮ ಶಿಷ್ಯರಿಗೆ ಹೀಗೆ ಬೋಧಿಸುತ್ತಿದ್ದರು: "ಒಂದು ವೇಳೆ ಇತರರನ್ನು ಬ್ರಹ್ಮದೃಷ್ಟಿಯಿಂದ ನೋಡ ಬಯಸುವೆಯಾದರೆ ಒಬ್ಬ ಮಹಾಪಾಪಿಯನ್ನೂ ಕಡೆಗಣಿಸಬಾರದು." ಆಗ ಅವರ ಮುಖ ದಿವ್ಯಕಾಂತಿಯಿಂದ ಬೆಳಗಲಾರಂಭಿಸುತ್ತಿತ್ತು ಹಾಗೂ ಅವರು ಎಷ್ಟೋಂದು ಪ್ರೇಮಪೂರ್ಣರಾಗಿಬಿಡುತ್ತಿದ್ದರೆಂದರೆ ಅವರ ಮುಖದಲ್ಲಿ ಲವಲೇಶವೂ ಕಠೋರತೆ ಇರುತ್ತಿರಲಿಲ್ಲ' ಎಂದು ಶುದ್ಧಾನಂದಜೀ ಹೇಳುತ್ತಿದ್ದರು. ಬ್ರಹ್ಮವಿದ್ವರೇಣ್ಯರಾದ ಶ್ರೀಗುರುವಿನ ಪದತಲದಲ್ಲಿ ಕುಳಿತು ಎಲ್ಲ ಶಾಸ್ತ್ರಗಳ ಮರ್ಮವನ್ನೂ ಅರಿತರು ಶುದ್ಧಾನಂದರು. ಸಂಸ್ಕೃತ ಬಾಷೆಯನ್ನು ಕಲಿಯಲು, ಸರಿಯಾಗಿ ಉಚ್ಚರಿಸಲು ಅಭ್ಯಾಸ ಮಾಡಬೇಕೆಂದು ಸ್ವಾಮಿ ವಿವೇಕಾನಂದರು

೧೯೦೨ರ ಜೂನ್ ಮಾಹೆಯ ಕೊನೆಯ ದಿನಗಳು. ಸ್ವಾಮಿ ವಿವೇಕಾನಂದರು ತಮ್ಮ ಪ್ರಿಯ ಶಿಷ್ಯರಾದ ಶುದ್ಧಾನಂದರಿಗೆ ಪಂಚಾಂಗ ತರುವಂತೆ ಹೇಳಿದರು. ಅವರು ಅದನ್ನು ತರಲಾಗಿ ಏನನ್ನೋ ತಿರಿವಿಹಾಕಿ ಅವರ ಕೈಗೇ ವಾಪಸ್ಸು ಕೊಟ್ಟರು. ತಮ್ಮ ಮಹಾಸಮಾಧಿಯ ದಿನವನ್ನು ತಮ್ಮ ಗುರುಗಳು ಗುರ್ತು ಹಾಕುತ್ತಿರುವರೆಂದು ಕ್ಷಣಕಾಲಕ್ಕೂ ಹೊಳೆಯಲಿಲ್ಲ ಶುದ್ಧಾನಂದರಿಗೆ. ಇದಾದ ಒಂದು ವಾರಕ್ಕೆ ಸರಿಯಾಗಿ ೪ನೆಯ ಜುಲೈ ೧೯೦೨ರಲ್ಲಿ ವಿವೇಕಾನಂದರು ಮಹಾಸಮಾಧಿ ಪಡೆದರು. ಶುದ್ಧಾನಂದರ ದುಃಖ ವರ್ಣನಾತೀತ. ಎಲ್ಲವೂ ಇದೆ, ಆದರೆ ಸ್ವಾಮಿಗಳಿಲ್ಲ. ಎಲ್ಲರ ಆಸೆ, ಆಕಾಂಕ್ಷೆ, ಉದ್ಯಮ, ತಪಸ್ಸು, ಸ್ಫೂರ್ತಿ ಎಲ್ಲವೂ ಅಕಸ್ಮಾತ್ ಆಗಿ ಮಾಯವಾದಂತಾಯಿತು. ಸ್ವಾಮೀಜಿ ಕಣ್ಮರೆಯಾದರು ನಿಜ, ಆದರೆ ಶುದ್ಧಾನಂದರು ಅನುಭವಕ್ಕೆ ತಂದುಕೊಂಡರು ಅವರ ಅಪಾರ ಮಹಾಶಕ್ತಿ ಇಡೀ ಸಂಘದಲ್ಲಿ ಕ್ರಿಯಾಶೀಲವಾಗಿದೆ ಎಂದು. ಒಮ್ಮೆ ವಿವೇಕಾನಂದರು ಶುದ್ಧಾನಂದರಿಗೆ ಹೇಳಿದ್ದರು, 'ನೋಡಿ, ನೀವೆಲ್ಲ ಹೊಸ ಹೊಸ ಭಾವನೆಗಳನ್ನು ಭಾವಿಸುವ ಸಾಹಸ ಮಾಡಬೇಕು. ಹಾಗಿಲ್ಲದಿದ್ದರೆ ನಾನು ಹೋದಕೂಡಲೆ ಎಲ್ಲವೂ ನುಚ್ಚು ನೂರಾಗುತ್ತದೆ. ನೆನಪಿರಲಿ ನಾನು ನನ್ನ ಮಕ್ಕಳಿಂದ ಮಹತ್ತರವಾದುದನ್ನು ನಿರೀಕ್ಷಿಸುತ್ತೇನೆ' ಎಂದು.

ಸ್ವಾಮಿ ತ್ರಿಗುಣಾತೀತರು ಸ್ಯಾನ್ ಫ್ರಾನ್ಸಿಸ್ಕೊಗೆ ಹೋದಮೇಲೆ ಸ್ವಾಮಿ ಶುದ್ಧಾನಂದರೆ 'ಉದ್ಬೋಧನ' ಮಾಸಪತ್ರಿಕೆಯ ಸಂಪಾದಕರಾದರು. ಅವರು ಸಂಪಾದಕರಾಗಿದ್ದ ಕಾಲ ನಿಜವಾಗಿಯೂ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದ ಕಾಲ. ಇಡೀ ವಿವೇಕಾನಂದರ ಸಾಹಿತ್ಯವನ್ನು ಬಂಗಾಲಕ್ಕೆ ಕೊಟ್ಟರು. ೧೯೦೩ರಲ್ಲಿ ರಾಮಕೃಷ್ಣ ಮಠದ ಟ್ರಸ್ಟಿಗಳಾಗಿ ಆಯ್ಕೆಯಾದರು. ಸ್ವಾಮಿ ಶಾರದಾನಂದರು ಇವರ ಮೇಲೆ ಪೂರ್ಣ ವಿಶ್ವಾಸವಿಟ್ಟಿದ್ದರು. ಯಾವ ವಿಚಾರವೇ ಆಗಲಿ 'ಶುದ್ಧಾನಂದರು ನೋಡಿರುವರು' ಎಂದರೆ 'ಸರಿ'

ವಿಸ್ತುತ್ತಿದ್ದರು ಶಾರದಾನಂದಜಿ. ಶುದ್ಧಾನಂದರು ಮಠದಲ್ಲಿನ ಸಾಧು ಬ್ರಹ್ಮಚಾರಿಗಳ ಶ್ರೇಯಸ್ಸಿಗಾಗಿ, ಹೊರಗಿನ ವಿವೇಕಾನಂದ ಸೊಸೈಟಿಗಳಿಗಾಗಿ, ಯುವಕರಿಗಾಗಿ ಅತ್ಯಂತ ಪ್ರೇಮದಿಂದ ಸೇವೆ ಸಲ್ಲಿಸುತ್ತಿದ್ದರು. ಯುವಕರೊಡನೆ ಬಹು ಸಮಯವನ್ನು ವೇದಾಂತ ಮತ್ತು ವಿವೇಕಾನಂದರ ಕುರಿತಾಗಿ ಚರ್ಚಿಸುವುದರಲ್ಲಿ ಕಳೆಯುತ್ತಿದ್ದರು. ತಮ್ಮ ತರಗತಿಗಳಿಗೆ ಯಾರಾದರೂ ಯುವಕರು ತಪ್ಪಿಸಿಕೊಂಡರೆ ಅವರ ಮನೆಗಳಿಗೇ ಹೋಗಿ ವಿಚಾರಮಾಡಿ ಬರುತ್ತಿದ್ದರು. ಆ ಯುವಕರಿಗೆಲ್ಲಾ ಶುದ್ಧಾನಂದರು ಆಕರ್ಷಣೀಯ ಕೇಂದ್ರಬಿಂದುವಾಗಿದ್ದರು. ಅವರ ಪವಿತ್ರಜೀವನದ ಪ್ರಭಾವದಿಂದಾಗಿ ಹಲವು ಯುವಕರು ಸರ್ವಸಂಗ ಪರಿತ್ಯಾಗ ಮಾಡಿ ಸಂನ್ಯಾಸಿಗಳಾದರು. ಉಳಿದವರು ಆದರ್ಶ ಗೃಹಸ್ಥ ಜೀವನ ಕೈಗೊಳ್ಳುತ್ತಿದ್ದರು.

೧೯೨೬ರಲ್ಲಿ ಬೇಲೂರು ಮಠದಲ್ಲಿ ಏಳು ದಿನಗಳ ಕಾಲ ಮಹಾಸಮ್ಮೇಳನ ನಡೆಯಿತು. ಅದರಲ್ಲಿ ಎಷ್ಟೋ ವಿಚಾರ ವಿನಿಮಯಗಳು ನಡೆದವು. ಬಹುಜನರಿಂದ ಶೋಭಿಸಿದ ಆ ಸಮ್ಮೇಳನಕ್ಕೆ ಮುಖ್ಯ ಕಾರಣಕರ್ತರು ಶುದ್ಧಾನಂದಜೀಯವರು. ಆ ಸಮ್ಮೇಳನದ ವರದಿಯಲ್ಲಿ ಈ ರೀತಿ ಬರೆದಿತ್ತು: 'ಸ್ವಾಮಿ ಶುದ್ಧಾನಂದರ ಅಪಾರ ಉತ್ಸಾಹ ಮತ್ತು ಎಡೆಬಿಡದ ಪ್ರಯತ್ನಗಳ ಫಲವಾಗಿಯೇ ಈ ಮಹಾಸಮ್ಮೇಳನದ ಕಲ್ಪನೆ ಕಾರ್ಯರೂಪಕ್ಕೆ ಬಂದಿತು.' ೧೯೨೭ರಲ್ಲಿ ಸ್ವಾಮಿ ಶಾರದಾನಂದಜಿ ಮಹಾಸಮಾಧಿಯನ್ನು ಪಡೆಯಲು, ಅವರ ಅತ್ಯಂತ ಗುರುತರವಾದ ಸ್ಥಾನವನ್ನು ಶುದ್ಧಾನಂದರು ಅಲಂಕರಿಸಿ, ಬಹು ದಕ್ಷತೆಯಿಂದ ಸುಮಾರು ೭ ವರ್ಷಗಳ ಕಾಲ ಆ ಸ್ಥಾನದಲ್ಲಿ ಮುಂದುವರಿದರು. ಶುದ್ಧಾನಂದರಿಗೆ ರಾಮಕೃಷ್ಣ ಮಿಷನ್ ಎಂದರೆ ರಾಮಕೃಷ್ಣ ಮಹಿಮಾ ಪ್ರಚಾರವೇ ಆಗಿತ್ತು. ಹಾಗಿಲ್ಲದಿದ್ದರೆ ಕರ್ಮವು ಭೋಗಕ್ಕೆ ಎಡೆಮಾಡಿಕೊಡುವುದೆ ವಿನಾ ಯೋಗಕ್ಕಲ್ಲ. ಒಮ್ಮೆ ಅವರು ರಂಗೂನಿನ ರಾಮಕೃಷ್ಣ ಆಶ್ರಮದ ಬೃಹತ್ ಸೇವಾಕಾರ್ಯವನ್ನು ವೀಕ್ಷಿಸಲು ಹೋಗಿದ್ದರು. ಅಲ್ಲಿನ ಕಾರ್ಯಕ್ರಮಗಳನ್ನು ನೋಡಿ ಮಾತನಾಡದೆ ಮೌನವಾಗಿ ಕುಳಿತರು. ಸಾಧುಗಳೊಬ್ಬರು 'ಸ್ವಾಮೀಜಿ, ನಮ್ಮ ಕಾರ್ಯ ಕಲಾಪ ಹೇಗಿದೆ, ತಮ್ಮ ಅಭಿಪ್ರಾಯ ಹೇಳಿರಿ' ಎನ್ನಲು, ಉತ್ತೇಜಿತರಾಗಿ ಶುದ್ಧಾನಂದರು ಈ ರೀತಿ ಹೇಳಿದರು : 'ಚೆನ್ನಾಗಿದೆ! ನಿಮ್ಮ ಸೇವೆ, ಕೆಲಸ ಕಾರ್ಯಗಳು ಎಲ್ಲಾ ನಿಜವಾಗಿಯೂ ರಾಮಕೃಷ್ಣ ವಿವೇಕಾನಂದರ ಪ್ರಚಾರವೇ. ಅದಕ್ಕಿಂತ ಹೆಚ್ಚಿನ ಒಳ್ಳೆಯ ಕೆಲಸವೇನಿದೆ?' ಸ್ವಲ್ಪ ಸಮಯ ಸುಮ್ಮನಿದ್ದು ನಂತರ ಹೇಳಿದರು: 'ನೋಡಿ, ನಾನು ಸ್ವಾಮಿ ವಿವೇಕಾನಂದರ ಕೃಪೆಯಿಂದ ಇಷ್ಟು ಮಾತ್ರ ಅರಿತಿದ್ದೇನೆ. ನಾವು ಮಾಡುವ ಯಾವ ಕಾರ್ಯವೇ ಆಗಲಿ ಅವರೀರ್ವರ ಮಹಿಮಾ ಪ್ರಚಾರವಷ್ಟೇ! ಮಿಷನ್ನಿನ ಪ್ರತಿ ಕಾರ್ಯವೂ ಶ್ರೀರಾಮಕೃಷ್ಣರನ್ನು ವ್ಯಕ್ತಗೊಳಿಸುವುದೇ ಆಗಬೇಕು. ಜನರು ನಮ್ಮ ಕಾರ್ಯಕ್ರಮಗಳನ್ನು ಕಂಡು ಶ್ರೀರಾಮಕೃಷ್ಣರ ಕಡೆಗೆ ಆಕರ್ಷಿತರಾಗಬೇಕು... ನಮ್ಮ ಕಡೆಗಲ್ಲ. ರಾಮಕೃಷ್ಣ-ವಿವೇಕಾನಂದರನ್ನು ಪ್ರಕಾಶಗೊಳಿಸುವುದೇ ನಮ್ಮ ಜೀವನ. ಇದಾಗದಿದ್ದಲ್ಲಿ, ಈ ಕೆಲಸ ಕಾರ್ಯಗಳು ಎಷ್ಟೇ ದೊಡ್ಡದಾದರೂ ಶ್ರೀರಾಮಕೃಷ್ಣರ ಕೆಲಸವಲ್ಲ.'

೧೯೩೪ರಲ್ಲಿ ಅವರ ದೇಹಾರೋಗ್ಯ ಬಹುವಾಗಿ ಕೆಟ್ಟು ಒಂದು ವರ್ಷ ಕಾಲ ವಿಶ್ರಾಂತಿಗಾಗಿ ಶ್ಯಾಮಲಾತಲಕ್ಕೆ ಹೋದರು. ಕರ್ಮ ಕೋಲಾಹಲದಿಂದ ದೂರವಾದ ಅವರು ಅಂತರ್ಜಗತ್ತಿನಲ್ಲಿ ವಿರಮಿಸತೊಡಗಿದರು. ಅಲ್ಲಿಂದ ಹರಿದ್ವಾರಕ್ಕೆ ಬಂದು ಕನ್‌ಖಲ್ ಸೇವಾಶ್ರಮದಲ್ಲಿ ಸ್ವಾಮಿ ಕಲ್ಯಾಣಾನಂದರೊಂದಿಗೆ ಹಲವು ಕಾಲ ಕಳೆದರು. ಪ್ರೀತಿಯ, ಗೌರವಾನ್ವಿತ ಗುರುಭಾಯಿಗಳನ್ನು ಕಂಡು ಕಲ್ಯಾಣಾನಂದರ ಆನಂದಕ್ಕೆ ಪಾರವೇ ಇರಲಿಲ್ಲ. ಆ ಆನಂದದಲ್ಲಿ ಸ್ವಾಮಿ ಶುದ್ಧಾನಂದರ ಮೇಲೆ ಒಂದು ಕವನವನ್ನೇ ರಚಿಸಿದರು. ಅದು ಹೀಗಿತ್ತು: 'ಓ ಜ್ಞಾನಿಶ್ರೇಷ್ಠ, ಶುದ್ಧಚಿತ್ತನಾದ ನೀನಾರು? ನಿನ್ನ ಅಪಾರ ಮೇಧಾಶಕ್ತಿಯಿಂದ ಸ್ವಾಮೀಜಿಯವರನ್ನು ಮುಗ್ಧಗೊಳಿಸಿದ ನೀನಾರು? ನಿನ್ನ ಪಾಂಡಿತ್ಯ ಪ್ರತಿಭೆಗಳನ್ನು ಹೊರಚೆಲ್ಲುತ್ತಾ ವಿವೇಕಾನಂದರ ಆಂಗ್ಲವಾಣಿಯನ್ನು ಭಾಷಾಂತರಿಸಿದ ನೀನಾರು? ನಿನ್ನ ಸದಸತ್ ವಿಚಾರದಿಂದ ಪಂಡಿತ ಪಾಮರರನ್ನು ಬೆರಗುಗೊಳಿಸಿದ ನೀನಾರು?'

೧೯೩೭ರಲ್ಲಿ ಅವರಿಗೆ ಪಾರ್ಶ್ವವಾಯುವಾಯಿತು. ಚಿಕಿತ್ಸೆಯಿಂದಾಗಿ ಸ್ವಲ್ಪ ಗುಣ ಹೊಂದಿದರು. ಆದರೆ ಅವರ ದೇಹ ಅವನತಿಯ ಕಡೆಗೆ ಹೊರಟಿತ್ತು. ಒಮ್ಮೆ ಯಾರೋ ವಿನೋದಕ್ಕಾಗಿ ಅವರನ್ನು ಈ ರೀತಿ ಪ್ರಶ್ನಿಸಿದರು,'ನೀವೇಕೆ ಕಾಷಾಯ ವಸ್ತ್ರ ಧರಿಸಿದಿರಿ?' ಎಂದು. ಅದಕ್ಕೆ ಸರಳವಾದ ಮಗುವಿನಂತೆ ನಗುತ್ತಾ ಶುದ್ಧಾನಂದರು ಉತ್ತರಿಸಿದರು, 'ನೋಡಿ, ಮರಣ ಎಂಬುದು ಎಲ್ಲರಿಗೂ ಶತಃಸಿದ್ಧ. ಮನೆಯಲ್ಲೇ ಇದ್ದರೆ ಕರೆ ಬಂದರೆ ಸುಲಭವಾಗಿ ಹೋಗಲು ಸಾಧ್ಯವಿಲ್ಲವೆಂದು ಇಲ್ಲಿ ಕಾಷಾಯವಸ್ತ್ರಧಾರಿಯಾಗಿ ಕುಳಿತಿದ್ದೇನೆ' ಎಂದು. ಗುರುಗತಪ್ರಾಣರಾಗಿರುವುದೇ ಶುದ್ಧಾನಂದರ ಜೀವನದ ಬಹುಮುಖ್ಯ ಅಂಶವಾಗಿತ್ತು. ಅವರು ತಮ್ಮ ಶ್ರೀಗುರುವು ಈ ರೀತಿ ಹೇಳುತ್ತಿದ್ದರೆಂದು ಹೇಳಿದರು : 'ಈ ಅದ್ಭುತ ಶ್ರೀರಾಮಕೃಷ್ಣ ಚರಿತ್ರೆಯನ್ನು ನಮ್ಮ ಅಲ್ಪಬುದ್ಧಿಯಿಂದ ಎಷ್ಟು ದೂರ ಆಲೋಚನೆ ಮಾಡಲು ಸಾಧ್ಯವೊ, ಅಷ್ಟು ಮಾಡಿಯೂ ಅವರ ಲಕ್ಷಾಂಶದ ಏಕಾಂಶವೂ ಈಗಲೂ ಅರಿವಿಗೆ ಬರಲಿಲ್ಲ. ಆದರೆ ಒಂದು ವಿಚಾರ—ಶ್ರೀರಾಮಕೃಷ್ಣರನ್ನು ಎಷ್ಟು ಅರಿಯಲು ಪ್ರಯತ್ನ ಪಡುವೆವೊ ಅಷ್ಟು ಸುಖವನ್ನು ಅನುಭವಿಸುತ್ತೇವೆ, ಆನಂದವನ್ನು ಹೊಂದುತ್ತೇವೆ.'

೧೯೩೭ರಲ್ಲಿ ಶುದ್ಧಾನಂದರು ರಾಮಕೃಷ್ಣ ಮಠದ ಉಪಾಧ್ಯಕ್ಷರಾದರು. ೧೯೩೮ರಲ್ಲಿ ವಿಜ್ಞಾನಾನಂದಜೀಯವರ ಮಹಾಸಮಾಧಿಯ ಬಳಿಕ ಅವರೇ ಮಠದ ಸರ್ವಾಧ್ಯಕ್ಷರಾದರು. ಅವರ ತ್ಯಾಗೋಜ್ವಲ ಚರಿತ್ರೆ, ನಿರಾಡಂಬರ ಜೀವನ, ಪ್ರೇಮಪೂರಿತ ಹೃದಯ ಎಲ್ಲರನ್ನೂ ಮುಗ್ಧಗೊಳಿಸುತ್ತಿತ್ತು. ಆದರೆ ಸಂಘದೇವತೆಯಾದ ಶ್ರೀರಾಮಕೃಷ್ಣರ ರೀತಿ ಬಹು ವಿಚಿತ್ರ! ಕೇವಲ ೬ ತಿಂಗಳು ಮಾತ್ರ ಸರ್ವಾಧ್ಯಕ್ಷ ಪದವಿಯನ್ನು ಅಲಂಕರಿಸಿದರು ಶುದ್ಧಾನಂದರು. ತಮ್ಮ ಕೊನೆಯ ದಿನಗಳನ್ನು ಭಗವತ್‌ಪ್ರಸಂಗ, ರಾಮಕೃಷ್ಣ ಕಥಾಮೃತ, ಇನ್ನಿತರ ಶಾಸ್ತ್ರಾಧ್ಯಯನದಲ್ಲಿ ಕಳೆದರು. ದೇಹತ್ಯಾಗದ ಹಿಂದಿನ ದಿನದವರೆಗೂ ಹೀಗೆಯೇ ನಡೆಯಿತು. ನಿರ್ಯಾಣದ ಮೂರು ದಿನದ ಹಿಂದೆ ಓರ್ವ ಅಂಧ ನಾರಿಯ ಕಷ್ಟಸುಖಗಳನ್ನು ವಿಚಾರಿಸಿದರು. ೧೯೩೮, ೨೩ನೆಯ ಅಕ್ಟೋಬರ್ ತಿಂಗಳು ಬೆಳಗ್ಗೆ ಸುಮಾರು ೮.೪೦ಕ್ಕೆ ತಮ್ಮ ಚಿರವಾಂಛಿತ ಪರಮಧಾಮವನ್ನು ಹೊಂದಿದರು. ಆಗ ಅವರ ವಯಸ್ಸು ೬೬ ವರ್ಷಗಳು.

ಹೀಗೆ ಸುಂದರವಾದ, ಶುದ್ಧವಾದ ಆತ್ಮಪದ್ಮವೊಂದು ಸ್ವಾಮಿ ವಿವೇಕಾನಂದರ ಶ್ರೀಚರಣ ಕಮಲಗಳನ್ನು ಅಲಂಕರಿಸಿತು. ★